ವಲಯದಲ್ಲಿ ಜೀವಂತವಾಗಿಟ್ಟಿತ್ತು. ನೆಹರೂ ವ್ಯಕ್ತಿತ್ವ ಕೂಡ ಆ ಕಾಲದ ಒಂದು ಬ್ರಾಹ್ಮಣ ವರ್ಗ ಬಲಪಂಥೀಯತೆಯ ಕಡೆಗೆ ಹೋಗದಂತೆ ತಡೆದಿತ್ತೆಂಬುದನ್ನು ಚರಿತ್ರೆ ದಾಖಲಿಸಲೇಬೇಕಾಗುತ್ತದೆ.

ಆದರೆ ಲೋಹಿಯಾರ ಸಮಾಜವಾದ ಹಾಗೂ ಸಮಾಜವಾದಿ ಪಕ್ಷ ನೆಹರೂ ಸಮಾಜವಾದಕ್ಕಿಂತ ಮುಂದೆ ಹೋಗಿತ್ತು; ಎಲ್ಲ ಜಾತಿಗಳಲ್ಲೂ ಕಾಣಬರುವ, ಸಮಾನತೆಯನ್ನು ಒಪ್ಪುವ, ಹೊಸ ಮನುಷ್ಯರನ್ನು ಹಾಗೂ ಎಲ್ಲ ಜಾತಿಗಳ ಬಡವರನ್ನು ಒಳಗೊಳ್ಳುವ ಜಾತ್ಯತೀತ ಕಲ್ಪನೆಯಿಂದ ಪಕ್ಷ ಹೊರಟಿತ್ತು. 'ಸಮಾನತಾ ಮನೋಭಾವದ ಬ್ರಾಹ್ಮಣ ಯುವಕ, ಯುವತಿಯರು ಸಮಾನತಾ ಮನೋಭಾವದ ಶೂದ್ರ, ದಲಿತ ತರುಣ ತರುಣಿಯರ ಜೊತೆಗೂಡಿ ಜಾತಿವಿನಾಶವನ್ನು ಕೈಗೆತ್ತಿಕೊಳ್ಳಬೇಕು' ಎಂದು ಲೋಹಿಯಾ ಹೇಳಿದ್ದರು. ಲೋಹಿಯಾರ ಈ ಬಗೆಯ ಸರ್ವಸ್ವೀಕಾರ ಮನೋಭಾವವಿಲ್ಲದಿದ್ದರೆ, ಜಾತ್ಯತೀತ ವೇದಿಕೆಗಳು ಸಂಕುಚಿತ ವೇದಿಕೆಗಳಾಗತೊಡಗುತ್ತವೆ. ಲೋಹಿಯಾರ ಜಾತ್ಯತೀತತೆಯ ಈ ಗುಣವನ್ನು ಇಂದಿನ ಜಾತ್ಯತೀತ ಚಿಂತನೆ ಆಳವಾಗಿ ಅರಿಯುವ ಅಗತ್ಯವಿದೆ.

## ಕಳೆದ ಸಂಚಿಕೆಯಲ್ಲಿ



ಫರೂಖಾಬಾದ್ ಸಂಸದ ಮೂಲ್‌ಚಂದ್ ದುಬೆ ತೀರಿಕೊಂಡು ತೆರವಾದ ಕ್ಷೇತ್ರದಲ್ಲಿ ಘೋಷಣೆಯಾದ ಮರು ಚುನಾವಣೆ ಲೋಹಿಯಾ ಅವರ ಚುನಾವಣಾ ರಾಜಕೀಯಕ್ಕೆ ಮತ್ತೊಂದು ಅವಕಾಶ ಕಲ್ಪಿಸಿತು. ಕಾಂಗ್ರೆಸ್‌ನ ಭದ್ರಕೋಟೆಯಲ್ಲಿ ಸಮಾಜವಾದಿ ಪಕ್ಷದ ಧ್ವಜ ಹಾರಿಸುವ ಪ್ರಯತ್ನ ಶುರುವಾಯಿತು. ಬದೌರಿಯಾ ಹಾಗೂ ರಾಜ್ ನಾರಾಯಣ್ ನೀಡಿದ ತಲಾ ನೂರು ರೂಪಾಯಿ ದೇಣಿಗೆಯಲ್ಲಿ ಫರೂಖಾಬಾದಿನಲ್ಲಿ ಚುನಾವಣಾ ಕಚೇರಿ ಆರಂಭವಾಯಿತು. ಚೀನಾ ಮುಖಾಮುಖಿ ನಂತರ ನೆಹರು ಜನಪ್ರಿಯತೆ ಕುಸಿದು, ವಿರೋಧ ಪಕ್ಷಗಳ ಧ್ವನಿ ಗಟ್ಟಿಯಾಗಿತ್ತು. 1962ರ ಚುನಾವಣೆಯಲ್ಲಿ ಬೇರೊಂದು ಕ್ಷೇತ್ರದಿಂದ ಸೋತಿದ್ದ, ಹಿಂದಿನ ಸರ್ಕಾರದಲ್ಲಿ ವಾರ್ತಾ ಮತ್ತು ಪ್ರಸಾರ ಮಂತ್ರಿಯಾಗಿದ್ದ ಕೇಸ್ಕರ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿದರು. ಚುನಾವಣೆಯಲ್ಲಿ ತಮ್ಮ ಪ್ರತಿಸ್ಪರ್ಧಿ ಕೇಸ್ಕರ್ ಅವರನ್ನು 57588 ಮತಗಳಿಂದ ಸೋಲಿಸಿದ ಲೋಹಿಯಾ ಲೋಕಸಭೆ ಪ್ರವೇಶಿಸಿದರು. ಲೋಕಸಭೆಯಲ್ಲಿ ಅವರ ಚೊಚ್ಚಲ ಭಾಷಣ ಸರ್ಕಾರದ ವೈಫಲ್ಯಗಳನ್ನು ಬಯಲುಗೊಳಿಸುವಂತಿತ್ತು. ಲೋಕಸಭಾ ಸದಸ್ಯರಾದ ಮೇಲೆ ಲೋಹಿಯಾ ಅವರಿಗೆ ಜೀವನದಲ್ಲಿ ಮೊದಲ ಬಾರಿಗೆ ಒಂದು ಮನೆ ಸಿಕ್ಕಿತು.

* * *

ಏಕಾಂಗಿಯಾಗಿ ಎಷ್ಟೇ ಹೋರಾಡಿದರೂ, ವ್ಯಾಪಕ ರಾಜಕೀಯ–ಸಾಮಾಜಿಕ ಬದಲಾವಣೆ ತರಲು ಸಂಘಟಿತ ರಾಜಕೀಯ ಪ್ರಯತ್ನ ಅತ್ಯಂತ ಮುಖ್ಯ ಎಂದು ಲೋಹಿಯಾಗೆ ಮನದಟ್ಟಾಗಿತ್ತು. 'ಒಂದು ಸಂಘಟನೆಯಿಲ್ಲದಿದ್ದರೆ ಮನುಷ್ಯ ಜೊಳ್ಳಾಗುತ್ತಾನೆ ಎಂಬುದನ್ನು ನಾನು ತಡವಾಗಿ ಅರಿತೆ' ಎಂದು ಕೂಡ ಲೋಹಿಯಾ ನಿವೇದಿಸಿಕೊಳ್ಳುತ್ತಾರೆ. 1963ರ ಉಪಚುನಾವಣೆಗಳಲ್ಲಿ ವಿರೋಧ ಪಕ್ಷಗಳ ಮತಗಳು ಹಂಚಿ ಹೋಗದಿದ್ದುದರಿಂದ ಫಲ ಸಿಕ್ಕಿತ್ತು. ಚುನಾವಣೆಯ ನಂತರ ನಡೆದ ಕಲ್ಕತ್ತಾದ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಭೆಯಲ್ಲಿ ಲೋಹಿಯಾ ಮೊದಲ ಬಾರಿಗೆ 'ಕಾಂಗ್ರೆಸ್ಸೇತರವಾದ'ದ ಪರಿಕಲ್ಪನೆಯನ್ನು ಮುಂದಿಟ್ಟರು. ಆ ಸಭೆಯಲ್ಲಿ ಮಧು ಲಿಮಯೆ ಮಾತಾಡಿರಲಿಲ್ಲ; ಆದರೆ ಮಧು ಲಿಮಯೆಯವರ ಅಭಿಪ್ರಾಯಗಳನ್ನು ಮಂಡಿಸುತ್ತಾ ಲೋಹಿಯಾರ ಐಡಿಯಾವನ್ನು ತೀವ್ರವಾಗಿ ವಿರೋಧಿಸಿದ ಜಾರ್ಜ್ ಫರ್ನಾಂಡಿಸ್ ಹೇಳಿದರು: 'ಇದನ್ನು ಜನರು ಕಳಂಕಿತ ಮಾರ್ಗ ಎಂದು ತಿರಸ್ಕರಿಸುತ್ತಾರೆ.'

ಜಾರ್ಜ್ ಫರ್ನಾಂಡಿಸರ ವಿರೋಧ ಹಾಗೂ ಕಾರ್ಯಕರ್ತರ ಅಭಿಪ್ರಾಯ ಎಲ್ಲವನ್ನೂ ಲೋಹಿಯಾ ಚಿತ್ತವಿಟ್ಟು ಕೇಳಿದರು. ದೇಶದ ರಾಜಕೀಯ ಸ್ಥಿತಿಯನ್ನು ಬಿಚ್ಚಿಡುತ್ತಾ ಲೋಹಿಯಾ ಹೇಳಿದರು: 'ಇದು ಸಿದ್ಧಾಂತವಲ್ಲ; ಒಂದು ರಾಜಕೀಯ ರಣನೀತಿ.'

ಈ ನಡುವೆ ಸಮಾಜವಾದಿ ಪಕ್ಷ, ಪ್ರಜಾಸಮಾಜವಾದಿ ಪಕ್ಷಗಳನ್ನು ಒಗ್ಗೂಡಿಸುವ ಪ್ರಯತ್ನಗಳು ನಡೆಯುತ್ತಲೇ ಇದ್ದವು. ಲೋಹಿಯಾರ ಕಾಂಗ್ರೆಸ್ ವಿರೋಧಿವಾದವನ್ನು ಪ್ರಜಾಸಮಾಜವಾದಿ ಪಕ್ಷ ಒಪ್ಪಲಿಲ್ಲ. ಎರಡು ಪಕ್ಷಗಳ ಐಕ್ಯತೆಗೆ ಲೋಹಿಯಾ ಪೆಡಸುತನವೇ ಅಡ್ಡಿ ಎಂಬ ಆಪಾದನೆ ಮತ್ತೆ ಮತ್ತೆ ಕೇಳಿಬರುತ್ತಿತ್ತು. ಆದರೆ ಈ ಐಕ್ಯತೆಯ ವಿಷಯದಲ್ಲಿ ಎಲ್ಲೋ ಒಂದೆಡೆ ಕೃಷ್ಣನ ಹಾಗೆ ಕರ್ತವ್ಯ ಮುಗಿಸಿ, ಬೇರೆ ಕೆಲಸಕ್ಕೆ ತೆರಳುವ ಕಾತರವೂ ಲೋಹಿಯಾಗೆ ಇದ್ದಂತಿತ್ತು.

'ರಾಮ ಕೃಷ್ಣ ಶಿವ' ಲೇಖನದಲ್ಲಿ ಕೃಷ್ಣನ ಒಂದು ಅಪೂರ್ವ ಗುಣವನ್ನು ಲೋಹಿಯಾ ಗುರುತಿಸುತ್ತಾರೆ: ತನಗಾಗಿಯಲ್ಲದೆ, ದೇಹದ ಇತರ ಭಾಗಗಳು ಜೀವಂತವಾಗಿರಲಿ ಎಂದು ಸದಾ ಟುಕುಗುಡುವ ಹೃದಯದಂತೆ ಕೃಷ್ಣ ಇತರರಿಗಾಗಿ ಬದುಕಿದ್ದ ಎನ್ನುತ್ತಾರೆ ಲೋಹಿಯಾ. ಈ ಗ್ರಹಿಕೆಯನ್ನು ಲೋಹಿಯಾರ ಬದುಕಿನ ಹಿನ್ನೆಲೆಯಲ್ಲಿ ನೋಡಿದರೆ, ಅವರ ವ್ಯಕ್ತಿತ್ವ, ಕ್ರಿಯೆ, ಚಿಂತನೆ ಪ್ರಯತ್ನಗಳೂ ಕೃಷ್ಣನ ಈ ರೀತಿಯಲ್ಲಿಯೇ ಇರುವಂತೆ ಕಾಣುತ್ತವೆ.

* * *

ಒಂದೆಡೆ ಜಾತಿಮೂಲದ ದಮನಗಳಿಗೆ ಉತ್ತರ; ಮತ್ತೊಂದೆಡೆ ಹಿಂದೂ, ಮುಸ್ಲಿಂ ವಿಭಜನೆಯ ಸಮಸ್ಯೆಗೆ ಪರಿಹಾರಗಳನ್ನು ಹುಡುಕಿ, ಮನಸ್ಸುಗಳನ್ನು ಒಂದುಗೂಡಿಸುವ ಕಾತರ... ಎರಡೂ ಲೋಹಿಯಾರಲ್ಲಿ ಸದಾ ಜಾಗೃತವಾಗಿದ್ದವು. ಪಾರ್ಲಿಮೆಂಟ್ ಅಧಿವೇಶನದ ಬಿಡುವಿನಲ್ಲಿ ಲೋಹಿಯಾ 3.10.1963ರಂದು ಹೈದರಾಬಾದಿನಲ್ಲಿ ಹಿಂದೂ, ಮುಸ್ಲಿಂ ಕುರಿತ ಗಂಭೀರ ಉಪನ್ಯಾಸವೊಂದನ್ನು ಮಾಡಿದರು. ಹಸನ್ ನಯೀಂ ಸುರಕೋಡ ಮಾಡಿರುವ 'ಹಿಂದೂ, ಮುಸ್ಲಿಂ' ಎಂಬ ಮಹತ್ವದ ಉಪನ್ಯಾಸದ ಗ್ರಹಿಕೆಗಳು:

'...ಹಿಂದೂ, ಮುಸಲ್ಮಾನ ಮುಂತಾಗಿ ಎಲ್ಲ ಮಕ್ಕಳಿಗೂ ಶಾಲೆಯಲ್ಲೂ ಮನೆಯಲ್ಲೂ ರಜಿಯಾ, ಶೇರ್‌ಶಹಾ, ಜಾಯಸಿ ಮುಂತಾದವರು ಹಿಂದೂಗಳ ಹಾಗೂ ಮುಸಲ್ಮಾನರ ಪೂರ್ವಜರು ಎನ್ನುವ ಸಂಗತಿಯನ್ನು ಮನವರಿಕೆ ಮಾಡಿಕೊಡಬೇಕು. ರಜಿಯಾ, ಶೇರ್‌ಶಹಾ, ಜಾಯಸಿ ಮುಂತಾದವರು ನನ್ನ ಪೂರ್ವಜರೆಂದೇ ನಾನು ಭಾವಿಸುತ್ತೇನೆ. ಅದೇ ರೀತಿ, ಹಿಂದೂ, ಮುಸಲ್ಮಾನರಾದಿಯಾಗಿ ಎಲ್ಲರೂ 'ಗಝ್ನಿ, ಘೋರಿ ಹಾಗೂ ಬಾಬರ್ ಸುಲಿಗೆಕೋರರಾಗಿದ್ದರು ಹಾಗೂ ಆಕ್ರಮಣಕಾರರಾಗಿದ್ದರು' ಎಂಬುದನ್ನು ಒತ್ತಿ ಹೇಳಲು ಸಮರ್ಥರಾಗಬೇಕೆಂದು ನಾನು ಬಯಸುತ್ತೇನೆ. ಈ ಎರಡೂ ಮಾತುಗಳನ್ನು ಆಡಿ ತೋರಿಸಲು ಅಳುಕಬಾರದು.

'ಕಾರಣ, ಗಝ್ನಿ, ಘೋರಿ, ಬಾಬರ್ ಇಡೀ ದೇಶವಾಸಿಗಳ ದೃಷ್ಟಿಯಲ್ಲಿ ಆಕ್ರಮಣಕಾರರಾಗಿದ್ದರು, ವಿದೇಶೀಯರಾಗಿದ್ದರು; ಈ ದೇಶದ ಜನರ ಆಡಳಿತವನ್ನು ಕೊನೆಗಾಣಿಸಿದ್ದರು. ಆದರೆ ರಜಿಯಾ ಸುಲ್ತಾನ, ಶೇರ್‌ಶಹಾ ಹಾಗೂ ಜಾಯಸಿಯಂಥವರು ನಮ್ಮೆಲ್ಲರ ಪೂರ್ವಜರಾಗಿದ್ದರು. ಇದು ಆ ಏಳೆಂಟು ಶತಮಾನಗಳ ನಮ್ಮ ಇತಿಹಾಸವನ್ನು ನೋಡುವ ದೃಷ್ಟಿಕೋನವಾಗಿಬಿಟ್ಟರೆ ಸಾಕು: ಹಿಂದೂ ಹಾಗೂ ಮುಸಲ್ಮಾನರು ಇತಿಹಾಸವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡದೆ, ಸಮನ್ವಯ ದೃಷ್ಟಿಕೋನದಿಂದ ನೋಡಲಾರಂಭಿಸುತ್ತಾರೆ. ನಮ್ಮ ಇತಿಹಾಸದಲ್ಲಿ ಯಾರು ವಿದೇಶೀಯರಾಗಿದ್ದರು, ಯಾರು ದೇಶೀಯರಾಗಿದ್ದರು ಎನ್ನುವುದು ಸ್ಪಷ್ಟವಾದ ಮೇಲೆ ಎರಡೂ ಸಮುದಾಯಗಳ ದೃಷ್ಟಿಕೋನ ಒಂದೇ ಆಗಬಲ್ಲದು.'